
ಅದರೊಳಗಿನಿಂದಲೇ ಮೂಡಿಬರುವ ಒಳದನಿಗಳು ಅಲ್ಲಗಳೆಯುತ್ತಿರುತ್ತವೆ. ನಮಗೆ ಅರ್ಜುನನ ಪ್ರಶಂಸೆಯ ಟೊಳ್ಳುದನಿಗಳ ಜೊತೆಯಲ್ಲಿಯೇ ಸುಟ್ಟು ಸುಟ್ಟು ಕರಕಾಗುತ್ತಿರುವ ಗಿಳಿ ಕೋಗಿಲೆಗಳ ಆರ್ತನಾದವೂ ಕೇಳುತ್ತಿರುತ್ತದೆ. ಈ ರೀತಿಯ ಉಪಾಯಗಳಿಂದಲೇ ಕವಿಯು ತನ್ನ ಮೇಲಿರುವ ರಾಜಕೀಯ, ಸಾಮಾಜಿಕ ಒತ್ತಡಗಳಿಂದ ತಪ್ಪಿಸಿಕೊಳ್ಳುತ್ತಾನೆ. ಇಂದ್ರ ಮತ್ತು ಅಗ್ನಿಯರ ಒಳಜಗಳದ ಫಲವಾಗಿ ನಡೆಯುವ ಸರ್ವನಾಶವನ್ನು ಚಿತ್ರಿಸುವುದರ ಮೂಲಕ ಪಂಪನು ತನ್ನ ಕಾಲದ ಮತ್ತು ನಮ್ಮ ಕಾಲದ ರಾಜಕೀಯದ ದಂದುಗಗಳನ್ನು ಕಟ್ಟಿಕೊಡುತ್ತಾನೆ. ಅಷ್ಟೇ ಅಲ್ಲ, ಇದು ಆಧುನಿಕರ ಎದುರಿಗಿರುವ ಪರಿಸರ ಸಂರಕ್ಷಣೆಯ ಬಿಕ್ಕಟ್ಟಿನ ಕಾರಣ ಮೀಮಾಂಸೆಯನ್ನೂ ಮಾಡುತ್ತದೆ.

ಈ. ಯಾವುದೇ ಸಾಹಿತ್ಯಕೃತಿಗಳಲ್ಲಿ 'ಕಾಲವನ್ನು ನಿರ್ವಹಿಸುವ' ಬಗೆಯು ಬಹಳ ಮುಖ್ಯವಾದುದು. ಕಾಲವನ್ನು ಹಿಗ್ಗಿಸುವ, ಕುಗ್ಗಿಸುವ, ಘಟನೆಗಳು ನಡೆಯುವ ಕ್ರಮವನ್ನು ಬದಲಿಸುವ ಮತ್ತು ಅವು ನಡೆಯುವ ಸ್ಥಳಗಳನ್ನು ವಾಸ್ತವ–ಕಾಲ್ಪನಿಕಗಳ ನಡುವೆ ಲಾಳಿಯಾಡಿಸುವ ಮೂಲಕವೇ ಕವಿಯು ಏನನ್ನೋ ಸಾಧಿಸುತ್ತಾನೆ. ಪಂಪನು ಆದಿಪುರಾಣ ಮತ್ತು ಪಂಪ ಭಾರತಗಳಲ್ಲಿ ಈ ಕೆಲಸವನ್ನು ಹಲವು ಬಗೆಯಲ್ಲಿ ನಿರ್ವಹಿಸುತ್ತಾನೆ. 'ಆದಿಪುರಾಣ'ವು ಒಂದು ಕಾಲಬಿಂದುವಿನಲ್ಲಿ ನಿಂತು ಹಲವು ದಿಕ್ಕುಗಳಲ್ಲಿ ಚಲಿಸುತ್ತದೆ. ಅದು ಭೂತ, ವರ್ತಮಾನಗಳನ್ನು ಮಾತ್ರವಲ್ಲ, ಭವಿಷ್ಯವನ್ನೂ ತೆಕ್ಕೆಯೊಳಗೆ ತೆಗೆದುಕೊಳ್ಳುತ್ತದೆ. ಏಕೆಂದರೆ, ಪಂಪ, ರತ್ನಾಕರವರ್ಣಿ ಮುಂತಾದವರಿಗೆ ಈ ವಿಷಯದಲ್ಲಿ ಹಿನ್ನೋಟದ ಬಲವಿದೆ. ಏಕೆಂದರೆ, ಅವರು ವೃಷಭನಾಥ ಮತ್ತು ಅವನ ಮಕ್ಕಳಿಗಿಂತ ಸಾವಿರಾರು ವರ್ಷಗಳ ದೂರದಲ್ಲಿ ಬದುಕಿರುವವರು. ಪ್ರಸಿದ್ಧ ಕಾದಂಬರಿಕಾರ ಗಾರ್ಸಿಯಾ ಮಾರ್ಕೆಜ್ ತನ್ನ '**Hundred Years of Solitude**' ಕಾದಂಬರಿಯಲ್ಲಿ, ಕೆಲವೇ ವರ್ಷಗಳ ಅವಧಿಯಲ್ಲಿ ಇಡೀ ಮನುಷ್ಯ ಜಾತಿಯ ಇತಿಹಾಸವನ್ನೇ ಹೇಳಿಬಿಡುವ ಹಾಗೆ, 'ಆದಿಪುರಾಣ' ಮತ್ತು 'ಭರತೇಶ ವೈಭವ'ಗಳ ಕವಿಗಳೂ ಕೆಲಸ ಮಾಡಿದ್ದಾರೆ. ಅವು ಪುರಾಣ, ಚರಿತ್ರೆ ಮತ್ತು ಸಮಕಾಲೀನಗಳನ್ನು ಒಂದರಲ್ಲೊಂದು ಬೆರೆಸಿಬಿಡುವ ವಿಧಾನವು ಅಚ್ಚರಿ ಹುಟ್ಟಿಸುವ ಸಾಹಿತ್ಯಿಕ ಸಾಧನೆ ಮತ್ತು ಜೀವನದರ್ಶನಗಳಿಗೆ ಎಡೆ ಮಾಡಿಕೊಡುತ್ತದೆ. ಇವುಗಳನ್ನು ಇನ್ನಷ್ಟು ವಿವರವಾಗಿ ಅಧ್ಯಯನ ಮಾಡುವ ಅಗತ್ಯವಿದೆ. ಇಲ್ಲಿ ಆಧುನಿಕ ಸಾಹಿತ್ಯಕ್ಕೂ ಅಗತ್ಯವಾದ ಮಾದರಿಗಳಿವೆ. ಒಬ್ಬನೇ ವ್ಯಕ್ತಿಯ ಜನ್ಮಾಂತರಗಳನ್ನು ನಿರೂಪಿಸುವ ಬಗೆಯು ಸಾಹಿತ್ಯಿಕ ತಂತ್ರವೂ ಹೌದು. ಇದರಿಂದ ವಾಸ್ತವ ಮತ್ತು ಭ್ರಾಮಕಗಳ ನಡುವಿನ ಗಡಿ ಗೆರೆಗಳನ್ನು ಅಳಿಸಿಹಾಕಿ ಹೊಸ ನೋಟಗಳನ್ನು ನೀಡಲು ಸಾಧ್ಯವಾಗುತ್ತದೆ.



ಉ. ಪಂಪನ ಎರಡೂ ಕೃತಿಗಳು ಸಾಮ್ರಾಜ್ಯಶಾಹಿ ಆಶಯಗಳು ಮತ್ತು ಸ್ಥಳೀಯ ಪ್ರತಿಭಟನೆಗಳ ನಡುವಿನಸಂಘರ್ಷವನ್ನು ಮತ್ತೆ ಮತ್ತೆ ಚಿತ್ರಿಸುತ್ತವೆ. ಹಾಗೆಯೇ, ಅವು ನಾಗರಿಕತೆಯ ಅತಿಕ್ರಮಣದಿಂದ ನಲುಗಿಹೋಗುವ ಅಂಚಿಗೆ ಸರಿಯುವ ದುರ್ಬಲ ಗಿರಿಜನ ಸಮುದಾಯಗಳ ಪರಾಜಯದ ಕಥನವೂ ಹೌದು. ಭರತ ಚಕ್ರವರ್ತಿಯ ಚಕ್ರರತ್ನದ ಚಲನೆಯಲ್ಲಿ, ಅಂತೆಯೇ ಅರ್ಜುನ–ದುರ್ಯೋಧನರ ಸ್ಪರ್ಧೆಯೂ ಇಂತಹುದೇ ವಿನಾಶಕ್ಕೆ ಎಡೆ ಮಾಡಿಕೊಡುತ್ತದೆ. ಅಧಿಕಾರವು ಮನುಷ್ಯನನ್ನು ಅಮಾನವೀಕರಣಗೊಳಿಸುವ ಬಗೆಯನ್ನು ನಾವು ನಮ್ಮ ಕಾಲದಲ್ಲಿಯೂ ನೋಡುತ್ತಿದ್ದೇವೆ. ಸ್ವತಃ ತಮ್ಮಂದಿರನ್ನೇ ಶತ್ರುಗಳಂತೆ ಪರಿಗಣಿಸುವ ಭರತನು ಇಂಥವರಿಗೆ ಮೂಲ ಮಾದರಿಯೇ ಸರಿ. ಅವನದು ಯಾವ ಅವಮಾನದಿಂದಲೂ ಪಾಠ ಕಲಿಯದ, ನಾಚಿಕೆ ಪಟ್ಟುಕೊಳ್ಳದ ಭಂಡ ಸ್ವಭಾವ.

ಊ. ಶಂತನು, ಭೀಷ್ಮರಿಂದ ಮೊದಲಾಗಿ ಬಾಹುಬಲಿ, ಭರತರವರೆಗೆ ಅನೇಕ ಪಾತ್ರಗಳು ಆಧುನಿಕ ಮನುಷ್ಯರು ಎದುರಿಸುತ್ತಿರುವ ಬಿಕ್ಕಟ್ಟುಗಳನ್ನೇ ತಮ್ಮದೇ ಆದ ರೀತಿಯಲ್ಲಿ ಎದುರಿಸುತ್ತಾರೆ. ಉದಾಹರಣೆಗೆ ಭೀಷ್ಮನ ಪಾತ್ರವನ್ನು ಎಚ್ಚರದಿಂದ ಗಮನಿಸಬೇಕು. ಅವನದು ಭಾವಾವೇಶಗಳಿಂದ,